**ಓ.ಎಸ್. ನಂಃ 386/2023**

**ಡಿ.ಡಬ್ಲ್ಯೂಃ 1**

**ದಿನಾಂಕ 25.10.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಎಲ್.ವಿ.ಆರ್ ವಕೀಲರಿಂದಃ</u>**

13. ಸಿವಿಲ್ ನ್ಯಾಯಾಲಯದಲ್ಲಿ ನಮ್ಮ ತಕರಾರನ್ನು ಇತ್ಯರ್ಥ ಪಡಿಸಿಕೊಳ್ಳುವಂತೆ ಹೇಳಿ ನಿಡಿ–32ರ ಹಿಂಬರಹವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಕರಿಗೌಡ @ ಕಾರಿಗೌಡರು 2014ರಲ್ಲಿ ಮರಣ ಹೊಂದಿದ್ದು ಅವರು ಮರಣ ಹೊಂದಿದ್ದ ದಿನಾಂಕ ನನಗೆ ಸರಿಯಾಗಿ ನೆನಪಿಲ್ಲ. ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ನಾನು ಮೇಲ್ಮನವಿಯನ್ನು ಸಲ್ಲಿಸಿದಾಗ ನಿಪಿ–33ರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಿದ್ದೆ. ನಿಪಿ–33ರ ಮರಣ ಪ್ರಮಾಣದಲ್ಲಿ ಕರಿಗೌಡ @ ಕಾರಿಗೌಡರ ತಂದೆಯ ಹೆಸರು ಮಾಯೀಗೌಡ @ ಕೆಂಪೇಗೌಡ ಎಂದು ನಮೂದಾಗಿರುತ್ತದೆ. ನಿಡಿ–32ರ ಹಿಂಬರಹಕ್ಕೆ ನಾನು ಸಲ್ಲಿಸಿದ ಅರ್ಜಿಯ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ದಾವೆಯನ್ನು ಹೂಡಿದ ನಂತರದಲ್ಲಿ ನಿಡಿ–32ರ ಹಿಂಬರಹವನ್ನು ನಾನು ಪಡೆದಿರುತ್ತೇನೆ ಎಂದರೆ ಸರಿ. ನಾನು ನನ್ನ ಅನುಕೂಲಕ್ಕೆ ತಕ್ಕಂತೆ ನಿಡಿ–32 ಮತ್ತು 33ರ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಕರಿಗೌಡ @ ಕಾರಿಗೌಡರು ನನಗೆ ಮರಣ ಶಾಸನ ಪತ್ರವನ್ನು ಬರೆದುಕೊಡದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**